ತೆಂಗಿನ ಮರದಿಂದ ನೀರಾ ಇಳಿಸುವ ತಂತಜ್ಞಾನ ಅಭಿವೃದ್ಧಿ

4670 (5186) : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೆಂಗಿನ ಮರದಿಂದ ನೀರಾ ಇಳಿಸುವ ತಾಂತ್ರಿಕತೆ ಹಾಗೂ ಸಂಸ್ಕರಣೆ ಬಗ್ಗೆ ತಂತ್ರಜ್ಞಾನ ಅಭಿವೃದ್ಧಿ ಪಡಿಸಲು ಕೇಂದ್ರ ಆಹಾರ ಸಂಶೋಧನಾ ಸಂಸ್ಥೆ ಹಗೂ ರಕ್ಷಣಾ ಆಹಾರ ಸಂಶೋಧನಾ ಸಂಸ್ಥೆಗೆ ವಹಿಸಿರುವುದು ನಿಜವಲ್ಲವೇ:

ಆ) ಹಾಗಿದ್ದಲ್ಲಿ ಇದಕ್ಕಾಗಿ ನೀಡಿದ ಅನುದಾನವೆಷ್ಟು;

ಇ) ಇದರ ಬಗ್ಗೆ ತಂತ್ರಜ್ಞಾನವನ್ನು ಮೇಲ್ಕಂಡ ಸಂಸ್ಥೆ ನೀಡಿದೆಯೇ:

ಈ) ಹಾಗಿದ್ದಲ್ಲಿ ಅದರ ಮುಖ್ಯಾಂಶಗಳೇನು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಹೌದು.

ಆ) ರೂ. 11.86 ಲಕ್ಷಗಳು

ಇ) ನೀಡಿದೆ.

ಈ) ತೆಂಗಿನ ಮರಗಳ ಹೊಂಬಾಳೆಗಳಿಂದ ನೀರಾ ಸಂಗ್ರಹಿಸುವ ಮುನ್ನ ಸಂಗ್ರಹಣಾ ಮಡಿಕೆಗಳನ್ನು ಪಾಶ್ಚರೀಕರಿಸಿ (Sterilize) ಕೀಟಗಳು ಬಾರದಂತೆ ಮಡಿಕೆಗೆ ಮತ್ತು ಹೊಂಬಾಳೆಗೆ ಪರದೆ ರೂಪದ ಚೀಲವನ್ನು ಕಟ್ಟಿ ನೀರಾ ಸಂಗ್ರಹಿಸಬೇಕು.

ಸಂಗ್ರಹಿಸಿದ ನೀರಾವನ್ನು ಪ್ರತ್ಯೇಕವಾಗಿ ವಿನ್ಯಾಸಗೊಳಿಸಿದ Mobile Chillers ಗಳಲ್ಲಿ ಸಾಗಾಣಿಕೆ ಮಾಡಬೇಕು.

ನಾನ್‌ಥರ್ಮಲ್ ಪ್ರಸಿಸಿಂಗ್ ವಿಧಾನದಲ್ಲಿ ನೀರಾಕ್ಕೆ 10 ಪಿಪಿಎಂ. ನೈಸಿನ್ (Preservative) ಉಪಯೋಗಿಸಿ ಒಂದು ವಆರದವರೆಗೆ ಕೆಡದಂತೆ ಸಂಗ್ರಹಿಸಿಡಬಹುದು.

ನೀರಾದಲ್ಲಿರುವ ಪೌಷ್ಟಿಕಾಂಶಗಳು ನಾಶವಾಗದಂತೆ ಥರ್ಮಲ್ ಪ್ರಸೆಸಿಂಗ್ ವಿಧಾನದಲ್ಲಿ ನೈಸಿನ್ ಪ್ರಿಸರ್‌ವೇಟಿವ್ ಬಳಸಿ 94 ಡಿಗ್ರಿ ಸಿ ನಲ್ಲಿ 1 ರಿಂದ 3 ನಿಮಿಷಗಳವರೆಗೆ ಪಾಶ್ಚರೀಕರಿಸಿದ ಮೇಲೆ 27 ಡಿಗ್ರಿ ಸಿ. ಗೆ ತಂಪು ಮಾಡಿದ ನಂತರ ಬಾಟಲು ಮತ್ತು ಅಲ್ಯೂಮಿನಿಯಂ ಕ್ಯಾನ್ ಗಳಲ್ಲಿ 60 ದಿನಗಳವರೆಗೆ ಕೆಡದಂತೆ ಸಂಗ್ರಹಿಸಿಡಬಹುದು. ಫ್ಲೆಕ್ಸಿಬಲ್ ಪ್ಯಾಕೇಜುಗಳಲ್ಲಿ ರೆಫ್ರಜರೇಟರ್‌ನಲ್ಲಿ 45 ದಿನಗಳವರೆಗೆ ಮತ್ತು ಸಾಮಾನ್ಯ ಸಂಗ್ರಹಣಾ ವಿಧಾನದಲ್ಲಿ 30 ದಿನಗಳವರೆಗೆ ಕೆಡದಂತೆ ಸಂಗ್ರಹಿಸಬಹುದು.

ರಾಜ್ಯದಲ್ಲಿ ಯಶಸ್ವಿನಿ ಸಹಕಾರಿ ಆರೋಗ್ಯ ವಿಮಾ ಯೋಜನೆ

4671 (5194) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಶಸ್ವಿನಿ ಸಹಕಾರಿ ಆರೋಗ್ಯ ವಿಮೆ ಯೋಜನೆಯನ್ನು ಕೈಗೊಳ್ಳಲಾಗಿದೆಯೇ?

ಆ) ಈ ಯೋಜನೆಯಲ್ಲಿ ರಾಜ್ಯದಲ್ಲಿ ಎಷ್ಟು ರೈತರು ಸದಸ್ಯರಾಗಿರುವರು? ಇದಕ್ಕೆ ಎಷ್ಟು ಹಣ ಸಂದಾಯವಾಗಿರುವುದು? ಈ ಯೋಜನೆಯ ಲಾಭ ಎಷ್ಟು ಜನರಿಗೆ ದೊರೆತಿರುವುದು?